ತುಂಬಾ ಖುಷಿಯಾಗಿತ್ತು. ಅಮ್ಮ ಅಡುಗೆ ಮಾಡುತ್ತಾಳೆ. ಅವಳಿಂದ ಕೆಲಸಕ್ಕೆ ಹೋಗಲು ಆಗುತ್ತಿಲ್ಲ. ಅಜ್ಜಿಯೇ ಕೆಲಸಕ್ಕೆ ಹೋಗಬೇಕು. ಆದರೆ ಅಜ್ಜಿ ಜ್ವರದಿಂದ ಮಲಗಿದ್ದಾಳೆ. ಅಜ್ಜಿ ಮಾಡುವ ಕೆಲಸವನ್ನು ಗೌಡರ ಮನೆಗೆ ಹೋಗಿ ರವಿ ಮಾಡಿ ಬರುತ್ತಿದ್ದ. ಅಜ್ಜಿಯ ಜ್ವರ ಇಂದು ಕಡಿಮೆ ಆಗಬಹುದು.ಶಾಲೆಗೆ ಹೋಗಬೇಕು ಎಂದುಕೊಂಡಿದ್ದ. ಈ ದಿನ ಅಜ್ಜಿಗೆ ಸ್ವಲ್ಪ ಜ್ವರ ಕಡಿಮೆ ಆಯಿತಾದರೂ ನಡೆದು ಹೋಗಿ ಕೆಲಸ ಮಾಡಿ ಬರುವಂತೆ ಆಗಲಿಲ್ಲ. ಹಾಗಾಗಿ ರವಿ ಇಂದೂ ಮನೆಯಲ್ಲಿಯೇ ಉಳಿಯಬೇಕಾಯಿತು.

ಮರುದಿನ ರವಿ ಶಾಲೆಗೆ ಬಂದ. ಶಾಲೆ ತಪ್ಪಿಸಿದವರು ಸೀದಾ ತರಗತಿಯೊಳಗೆ ಹೋಗುವಂತೆ ಇಲ್ಲ. ಅವರು ಹೆಡ್ ಸರ್ ಇಲ್ಲವೇ ಕ್ಲಾಸ್ ಟೀಚರ ಹತ್ತಿರ ಒಪ್ಪಿಗೆ ಪಡೆದೇ ಒಳಗೆ ಹೋಗಬೇಕು. ರವಿಯ ಕ್ಲಾಸ್ ಟೀಚರ್ ಸರಳಾ ಅವರು ಇನ್ನೂ ಬಂದಿಲ್ಲ. ಪ್ರಾರ್ಥನೆಯ ನಂತರ ಕೇಳಿಕೊಂಡು ಒಳಗೆ ಹೋದರಾಯಿತು ಎಂದು ಪುಸ್ತಕದ ಚೀಲವನ್ನು ಹೊರಗೇ ಇಟ್ಟ.

ಪ್ರಾರ್ಥನೆ ಮುಗಿಸಿ ರವಿ ತನ್ನ ಕ್ಲಾಸಿನ ಬಾಗಿಲ ಹೊರಗೇ ನಿಂತಿದ್ದ. ಅಷ್ಟರಲ್ಲಿ ಹೆಡ್ ಸರ್ ಶಾಲಾ ಅಧ್ಯಕ್ಷರೊಂದಿಗೆ ಅಲ್ಲಿಗೆ ಬಂದರು. ರವಿಯನ್ನು ನೋಡಿ 'ಯಾಕೆ ನೀನು ಶಾಲೆಗೆ ಬಂದಿರಲಿಲ್ಲ, ಹೀಗೆ ಯಾಕೆ ಶಾಲೆ ತಪ್ಪಿಸುತ್ತಿದ್ದೀಯ?' ಅಂದರು. ರವಿ ಅಜ್ಜಿಗೆ ಜ್ವರ ಬಂದುದನ್ನು ಅಮ್ಮನಿಗೆ ಪುಟ್ಟ ತಂಗಿ ಇರುವುದನ್ನು ಹೇಳಿ ತಾನು ಕೆಲಸಕ್ಕೆ ಹೋದದ್ದನ್ನೆಲ್ಲ ಹೇಳಿದ. ಸರ್ ಇನ್ನು ಹೀಗಾಗಬಾರದು ಎನ್ನುತ್ತಾ ಮತ್ತೇನೂ ಹೇಳದೆ ಒಳಗೆ ಕಳಿಸಿದರು.

ರವಿ ಹೋಗಿ ಶಶಾಂಕನ ಹತ್ತಿರ ತನ್ನ ಸೀಟಿನಲ್ಲಿ ಕುಳಿತುಕೊಳ್ಳುವಷ್ಟರಲ್ಲಿ ಸರ್ ಹಾಗೂ ಅಧ್ಯಕ್ಷರು ಒಳಗೆ ಬಂದರು. ಅವರ ಹಿಂದೆ ಸರಳಾ ಟೀಚರ್ ಕೂಡಾ ಬಂದರು. ಅಧ್ಯಕ್ಷರು, 'ನನ್ನ ಮಗ ಶಶಾಂಕನ ನೋಟ್ ಬುಕ್ ಈಗ ಮೂರು ದಿನದಿಂದ ಕಳೆದು ಹೋಗಿದೆ. ಟೀಚರಿಗೆ ಹೇಳು ಎಂದರೆ ಹೇಳಿದ್ದೇನೆ ಅನ್ನುತ್ತಾನೆ. ನೋಟ ಬುಕ್ ಮಾತ್ರ ಇನ್ನೂವರೆಗೆ ಸಿಕ್ಕಿಲ್ಲ' ಅಂದರು. ಸರಳಾ ಟೀಚರ್, 'ಎಲ್ಲರನ್ನೂ ವಿಚಾರಿಸಿದೆ, ಹುಡುಕಿದೆ ಆದರೂ ಸಿಗಲಿಲ್ಲ' ಎಂದರು. ಆಗ, 'ಈ ಹುಡುಗ ಮೂರು ದಿನದಿಂದ ಶಾಲೆಗೆ ಬರಲಿಲ್ಲ ಅನ್ನುತ್ತಿದ್ದಾನೆ, ಇವನೇ ಕಳ್ಳನಾಗಿರಬೇಕು. ಇವನ ಚೀಲದಲ್ಲಿ ಹುಡುಕಿ' ಎಂದು ಶಶಾಂಕನ ತಂದೆ ಹೇಳುತ್ತಿದ್ದರೆ, ಸರಳಾ ಟೀಚರ್, 'ರವಿ ಅಂತವನಲ್ಲ' ಎಂದು ಹೇಳತೊಡಗಿದ್ದರು. ಅಷ್ಟರಲ್ಲಿ ರವಿ ತನ್ನ ಚೀಲವನ್ನು ಸುರಿದುಬಿಟ್ಟ. 'ನೋಡು ನೋಡು' ಎನ್ನುತ್ತಿದ್ದಂತೆ 'ಇದೇ ನನ್ನ ನೋಟ್ ಬುಕ್' ಎಂದು ಎರಡು ನೋಟ್ ಬುಕ್ ಅನ್ನು ಶಶಾಂಕ ಎಳೆದುಕೊಂಡ. ರವಿಗೆ ತನ್ನ ಚೀಲದಲ್ಲಿ ಹೇಗೆ ಶಶಾಂಕನ ನೋಟಬುಕ್ ಬಂತೆಂದು ತಿಳಿಯಲಿಲ್ಲ.

'ನೋಡಿ ಕಳ್ಳ ಸಿಕ್ಕಿಬಿದ್ದ. ಇವರೆಲ್ಲ ಶಾಲೆ ಕಲಿಯುವವರಲ್ಲ, ಕಳ್ಳತನ ಕಲಿಯುವವರು' ಎಂದು ಶಶಾಂಕನ ತಂದೆ ಹೇಳುತ್ತಿದ್ದಂತೆ ರವಿ ಅಳಲು ತೊಡಗಿದ. ಶಶಾಂಕ್ ಇದನ್ನೆಲ್ಲಾ ನೋಡುತ್ತಾ ಒಂದು ರೀತಿ ಹೆದರಿ ಸುಮ್ಮನೆ ನಿಂತಿದ್ದ. ಶಶಾಂಕನ ತಂದೆ, 'ಹೆಡ್ ಮಾಸ್ಟರ್ ನೀವು ಮೊದಲು ಅವನಿಗೆ ಪೆಟ್ಟು ಹಾಕಿ. ಟಿ.ಸಿ. ತೆಗೆದು ಮನೆಗೆ ಕಳಿಸಿ' ಎಂದೆಲ್ಲಾ ಹೇಳತೊಡಗಿದಾಗ ಸರ್ ಸುಮ್ಮನೆ ನಿಂತಿದ್ದರು. ಈಗ ಶಶಾಂಕನ ತಂದೆ ನೀವು ಪೆಟ್ಟು ಹಾಕ್ತಿರೋ ನಾನು ಹಾಕಲೋ ಎಂದು ಮುಂದೆ ಬಂದಾಗ, ಸರ್ ನಿಲ್ಲಿ ನಿಲ್ಲಿ ಎಂದು ಹೇಳುತ್ತಿದ್ದರು. ಆಗ ಸರಳಾ ಟೀಚರ್ ಒಮ್ಮೆಲೆ ಮುಂದೆ ಬಂದರು.

'ಯಾವಾಗಲೂ ರವಿಯ ನೋಟ್ ಬುಕ್ ನಿಮ್ಮ ಮಗನ ಹತ್ತಿರ ಇರುತ್ತದೆ. ರವಿಯದನ್ನೇ ನೋಡಿಕೊಂಡು ಅವನು ಬರೆಯುತ್ತಾನೆ. ಅವರಿಬ್ಬರೂ ಗೆಳೆಯರು. ಏನಾಗಿದೆ ಎಂದು ನಿಮ್ಮ ಮಗನನ್ನು ಸರಿಯಾಗಿ ಕೇಳಿ' ಎಂದು ಸಿಟ್ಟಿನಿಂದಲೇ ಹೇಳಿದರು. ಅಷ್ಟರಲ್ಲಿ ಶಶಾಂಕ, 'ರವಿಯ ಎರಡು ನೋಟ್ ಬುಕ್ ನನ್ನ ಚೀಲದಲ್ಲಿ ಇದೆ. ಅದನ್ನು ಆ ದಿನ ರವಿಯ ಚೀಲಕ್ಕೆ ಹಾಕುವ ಬದಲು ತಪ್ಪಿನಿಂದ ನನ್ನದನ್ನು ನಾನೇ ಹಾಕಿ ಬಿಟ್ಟಿದ್ದೆ' ಎಂದ. 'ಇದನ್ನು ನನಗೆ ಯಾಕೆ ಹೇಳಲಿಲ್ಲ' ಎಂದು ಶಶಾಂಕನ ತಂದೆ ಜೋರಾಗಿ ಕೇಳುತ್ತಿದ್ದರೆ ಶಶಾಂಕ ಹೆದರಿ ನಡುಗುತ್ತ ಅವರ ಮುಖವನ್ನೇ ನೋಡುತ್ತಿದ್ದ. ಸರ್, 'ಮಕ್ಕಳು ತಪ್ಪು ಮಾಡುತ್ತಾರೆ, ಸಮಾಧಾನ... ಸಮಾಧಾನ...' ಎಂದು ಹೇಳುತ್ತಿದ್ದರೆ ಶಶಾಂಕನ ತಂದೆ ಬುಸ್ ಬುಸ್ ಎಂದು ಉಸಿರುತೆಗೆಯುತ್ತ ಹೆಡ್ ಸರ್ ಕೋಣೆಯ ಕಡೆಗೆ ಹೆಜ್ಜೆ ಹಾಕಿದರು. ಶಶಾಂಕ ರವಿಯನ್ನು ತಬ್ಬಿಕೊಂಡು ಅಳುತ್ತಿದ್ದ. ●